**ಕರ್ನಾಟಕ ವಿಧಾನ ಪರಿಷತ್ತು**

**140ನೇ ಅಧಿವೇಶನ**

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.** | : | 1314 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ.ಸಿ ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 18-03-2020 |
| ಉತ್ತರಿಸುವ ಸಚಿವರು | : | ಮಾನ್ಯ ಉಪಮುಖ್ಯಮಂತ್ರಿಗಳು, (ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ) |

| ಕ್ರ.ಸಂ | ಪ್ರಶ್ನೆ | ಉತ್ತರಗಳು |
|---|---|---|
| ಅ) | ಬಳ್ಳಾರಿ ಜಿಲ್ಲೆ, ಕಂಪ್ಲಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಬಳ್ಳಾರಿ ತಾಲ್ಲೂಕಿನ ತಾಳುರು ರಸ್ತೆಯಿಂದ ಸಿರಿಗೆರೆ ಕ್ರಾಸ್‌ವರೆಗೆ (ರಾಜ್ಯ ಹೆದ್ದಾರಿ-128) SHDP ಮೊದಲನೇ ಪ್ಯಾಕೇಜ್ ಮುಕ್ತಾಯದ ನಂತರದಿಂದ ಅಂದಾಜು 25.00 ಕಿ.ಮೀ ಸಿರಿಗೆರೆ ಕ್ರಾಸ್‌ವರೆಗೆ ವಯಾ ತಾಳೂರು-ಕರೂರು-ದರೂರು-ಸಿರಿಗೆರೆ ಕ್ರಾಸ್ (ರಾಷ್ಟ್ರೀಯ ಹೆದ್ದಾರಿ 150ಎ) ಗೆ ಸೇರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು 2019-20ನೇ ಸಾಲಿನ SHDP ಯೋಜನೆಯಡಿಯಲ್ಲಿ ಅನುಮೋದನೆ ನೀಡಲಾಗಿದೆಯೇ; | ದರೂರು ಗ್ರಾಮದಿಂದ ತಾಳೂರು ಗ್ರಾಮದ ವರೆಗಿನ ರಸ್ತೆಯು ರಾಜ್ಯ ಹೆದ್ದಾರಿ-128ರ ಭಾಗವಾಗಿರುತ್ತದೆ ಹಾಗೂ ಕಿಮೀ.169.00 ರಿಂದ 180.44 ರವರೆಗೆ (ಉದ್ದ-11.44ಕಿಮೀ) ಇರುತ್ತದೆ. ಈ ರಸ್ತೆಯನ್ನು ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (SHDP) ಹಂತ-2 ರಲ್ಲಿ 2015-16ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಲಾಗಿದೆ. ಈ ಭಾಗದ ರಸ್ತೆಯ ಚಲನಾ ಪಥವು 3.75ಮೀ ಇರುತ್ತದೆ.<br><br>ಸಿರಿಗೇರಿ ಕ್ರಾಸ್ (ರಾಷ್ಟ್ರೀಯ ಹೆದ್ದಾರಿ-150ಎ) ನಿಂದ ದರೂರು ವರೆಗಿನ ರಸ್ತೆಯು ಕುರುಗೋಡು-ಸಿರಿಗೇರಿ-ಮಾರಲಮಡಿಕಿ ಜಿಲ್ಲಾ ಮುಖ್ಯ ರಸ್ತೆಯ ಭಾಗವಾಗಿದ್ದು, ಕಿಮೀ.18.70 ರಿಂದ 24.00ರ ವರೆಗೆ ಇರುತ್ತದೆ (ಉದ್ದ-5.30ಕಿಮೀ). ಈ ರಸ್ತೆಯ ಭಾಗವನ್ನು ರಾಷ್ಟ್ರೀಯ ಹೆದ್ದಾರಿ ವಲಯದ ವತಿಯಿಂದ ಕೇಂದ್ರ ರಸ್ತೆ ಅಭಿವೃದ್ಧಿ ನಿಧಿ (ಸಿ.ಆರ್.ಎಫ್) ಯೋಜನೆಯ ಅಡಿಯಲ್ಲಿ 2016-17ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಲಾಗಿದೆ. ಈ ಭಾಗದ ರಸ್ತೆಯ ಚಲನಾ ಪಥವು 5.50ಮೀ ಇರುತ್ತದೆ. |
| ಆ) | ಅನುಮೋದನೆ ನೀಡಿದ್ದಲ್ಲಿ ಈ ಕಾಮಗಾರಿಗೆ ಎಷ್ಟು ಹಣ ಬಿಡುಗಡೆಯಾಗಿದೆ; ಕಾಮಗಾರಿ ಕೆಲಸ ಯಾವ ಹಂತದಲ್ಲಿದೆ? | ಆದಕಾರಣ, 2019-20ನೇ ಸಾಲಿನಲ್ಲಿ ಎಸ್‌ಹೆಚ್‌ಡಿಪಿ ಯೋಜನೆಯಡಿ ಪುನ: ಮಂಜೂರು ಮಾಡಿರುವುದಿಲ್ಲ. |

ಸಂಖ್ಯೆ:ಲೋಇ E-59 ಇಎಪಿ 2020

**(ಗೋವಿಂದ ಎಂ. ಕಾರಜೋಳ)**

ಮಾನ್ಯ ಉಪಮುಖ್ಯಮಂತ್ರಿಗಳು,

(ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆ)